


ಕಾಸರಗೋಡು, ಅ. 2: ‘ಕ್ಲೀನ್ ಇಂಡಿಯಾ ಮಿಶನ್’ ಕಾರ್ಯಕ್ರಮದಂಗವಾಗಿ ಕೇಂದ್ರ ತೋಟದ ಬೆಳೆ ಸಂಶೋಧನ ಕೇಂದ್ರ (ಸಿಪಿಸಿಆರ್‌ಐ)ದ ಸ್ಟಾಫ್ ರಿಕ್ರಿಯೇಶನ್ ಕ್ಲಬ್‌ನ ಸದಸ್ಯರಿಂದ ಸಂಗ್ರಹಿಸಿದ ದೇಣಿಗೆಯನ್ನು ಕುಂಬಳೆ ಗ್ರಾಮ ಪಂಚಾಯತ್‌ನಲ್ಲಿ ಶೌಚಾಲಯ ನಿರ್ಮಿಸಲು ಹಸ್ತಾಂತರಿಸಲಾಯಿತು.

ಕುಂಬಳೆ ಪೇಟೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಿಪಿಸಿಆರ್‌ಐ ನಿರ್ದೇಶಕ ಡಾ। ಪಿ. ಚೌಡಪ್ಪ ಅವರು ಕುಂಬಳೆ ಗ್ರಾಮ ಪಂಚಾಯತ್ ಅಧ್ಯಕ್ಷೆ ಕೆ.ವಿ. ತಾಹಿರಾ ಯೂಸಫ್ ಅವರಿಗೆ ದೇಣಿಗೆಯನ್ನು ಹಸ್ತಾಂತರಿಸಿದರು.

ಕೆ.ವಿ. ತಾಹಿರಾ ಯೂಸಫ್ ಅಧ್ಯಕ್ಷತೆ ವಹಿಸಿದರು. ಡಾ। ಚೌಡಪ್ಪ ಅವರು ಉದ್ಘಾಟಿಸಿದರು. ಬ್ಲಾಕ್ ಪಂ. ಸದಸ್ಯೆ ಸ್ನೇಹಲತಾ ದಿವಾಕರ್, ವಾರ್ಡ್ ಸದಸ್ಯರಾದ ಉಷಾ ಕುಮಾರಿ, ಇಬ್ರಾಹಿಂ ಮೊಗರು, ಕಣಿಪುರ ಶ್ರೀ ಗೋಪಾಲಕೃಷ್ಣ ದೇವಸ್ಥಾನದ ಎಕ್ಸಿಕ್ಯೂಟಿವ್ ಆಫೀಸರ್ ಸತ್ಯನಾರಾಯಣ, ವ್ಯಾಪಾರಿ ವ್ಯವಸಾಯಿ ಏಕೋಪನ ಸಮಿತಿ ಕಾರ್ಯದರ್ಶಿ ಮೋಹನ, ಸದಾನಂದ ಮೊದಲಾದವರು ಶುಭಹಾರೈಸಿದರು.

ರಿಕ್ರಿಯೇಶನ್ ಕ್ಲಬ್‌ನ ಉಪಾಧ್ಯಕ್ಷ ಡಾ। ಸಿ. ತಂಬಾನ್ ಸ್ವಾಗತಿಸಿದರು. ಕಾರ್ಯದರ್ಶಿ ಡಾ। ಕೆ.ಕೆ. ಸಜಿನಿ ವಂದಿಸಿದರು.